Dt 07.08.2024

O.S No.75-2019
DW-1 ಹೇಮಾವತಿ
Date: 07.08.2024

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ವಾದಿ ಪರ ವಕೀಲರಿಂದಃ</u>

ನನ್ನ ತಂದೆಯ ಹೆಸರು ಮಬ್ಬಣ್ಣನವರ ತಿಮ್ಮಪ್ಪ ಎಂದರೆ ಸರಿ. ಎರಡನೇ ಪ್ರತಿವಾದಿ ನನ್ನ ಅಕ್ಕ ಎಂದರೆ ಸರಿ. 3 ನೇ ಪ್ರತಿವಾದಿ ಕೂಡ ನನ್ನ ಸಹೋದರಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅವರು ಬೇರೆಯವರು ಎಂದು ನುಡಿದಿರುತ್ತಾರೆ. ನನ್ನ ತಂದೆ ಗಂಗಮ್ಮರವರಿಗೆ ದತ್ತಕ್ಕೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಗಂಗಮ್ಮರವರನ್ನು ದತ್ತಕ್ಕೆ ಪಡೆದುಕೊಂಡ ವಿಚಾರ ನನಗೆ ತಿಳಿದಿದ್ದರೂ ಕೂಡ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ನನ್ನ ವಿರುದ್ಧ ಮೋಹನ್ ರೆಡ್ಡಿಯವರು ಹೂಡಿರುತ್ತಾರೆ. ದಾವಾ ಸ್ವತ್ತು ಚಳ್ಳಕೆರೆ ಗ್ರಾಮದಲ್ಲಿ ಇರುವ ಸರ್ವೆ ನಂಬರ್ 51 ಆಗಿರುತ್ತದೆ ಮತ್ತು ಅದರ ವಿಸ್ತೀರ್ಣ 30 ಎಕರೆ 30 ಗುಂಟೆ ಆಗಿರುತ್ತದೆ. ಸದರಿ ಸ್ವತ್ತನ್ನು ನನ್ನ ತಂದೆ ದಿ.28.04.1956 ರಂದು ಖರೀದಿ ಮಾಡಿದ್ದರು ಎಂದರೆ ಸರಿ. ದಿಃ10.05.1995 ರಂದು ಮರಣ ಶಾಸನದ ಮೂಲಕ ಸದರಿ ಸ್ವತ್ತನ್ನು ನನ್ನ ತಂದೆ ತಿಪ್ಪಕ್ಕ, ಮಂಜಮ್ಮ ಮತ್ತು ಗಂಗಮ್ಮರವರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದರ ಪ್ರಕಾರ 20 ಎಕರೆ 25 ಗುಂಟೆ ಜಮೀನು ಮಂಜಮ್ಮ ಮತ್ತು ಗಂಗಮ್ಮ ರವರ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ಜಮೀನನ್ನು 5 ನೇ ಪ್ರತಿವಾದಿ ತಿಪ್ಪೇಸ್ವಾಮಿ ರವರು ದಿಃ26.02.2007 ರಂದು ಮಂಜಮ್ಮ ಮತ್ತು ಗಂಗಮ್ಮರವರಿಂದ ಖರೀದಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ದಾವಾ ಸ್ವತ್ತಾದ 11 ಎಕರೆ 8 ಗುಂಟೆ ಜಮೀನನ್ನು 5 ನೇ ಪ್ರತಿವಾದಿಯಿಂದ ವಾದಿ ಮೋಹನ್

ರೆಡ್ಡಿ ದಿಃ07.12.2013 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ನಂತರ ಸದರಿ ಸ್ವತ್ತಿನ ಕಂದಾಯ ದಾಖಲಾತಿಗಳು ವಾದಿಯ ಹೆಸರಿಗೆ ಬಂದಿರುತ್ತವೆ ಎಂದರೆ ಸರಿಯಲ್ಲ. 2013 ರಿಂದ ಇವರೆಗೆ ವಾದಿಯೇ ದಾವಾ ಸ್ವತ್ತಿನ ಸ್ವಾಧೀನ ಮತ್ತು ಅನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ನಾನು ಪಾಲು ವಿಭಾಗ ಕೋರಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ.88/2006 ನ್ನು ಹೂಡಿದ್ದೇನು ಎಂದರೆ ಸರಿ. ಸದರಿ ದಾವೆಯಲ್ಲಿ ಮಂಜಮ್ಮ, ಪ್ರಕಾಶ, ಗಂಗಮ್ಮ ಮತ್ತು ತಿಪ್ಪೇಸಾಮಿರವರು ಪಕ್ಷಗಾರರಾಗಿದ್ದರು ಎಂದರೆ ಸರಿಯಲ್ಲ. ಸದರಿ ದಾವೆ ವಜಾಗೊಂಡಿತ್ತು ಎಂದರೆ ಸರಿ. ಸದರಿ ತೀರ್ಪಿನ ವಿರುದ್ಧ ನಾನು ಚಿತ್ರದುರ್ಗದ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಆರ್.ಎ.ನಂ.102/2010 ರಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದೇನು ಮತ್ತು ಅದು ಪುರಸ್ಕೃತಗೊಂಡಿತ್ತು ಎಂದರೆ ಸರಿ. ಸದರಿ ದಾವೆ ಮತ್ತು ಮೇಲ್ಮನವಿಯಲ್ಲಿ ಆಸ್ತಿಯನ್ನು ಮಾರಾಟ ಮಾಡದಂತೆ ನಾನು ತಡೆಯಾಜ್ಞೆಯನ್ನು ಕೋರಿದ್ದೇನು. ಆ ರೀತಿ ನ್ಯಾಯಾಲಯ ತಡೆಯಾಜ್ಞೆಯನ್ನು ಹೊರಡಿಸಿತ್ತು. ಆ ರೀತಿ ಪಡೆದುಕೊಂಡ ತಡೆಯಾಜ್ಞೆಯ ಆದೇಶವನ್ನು ತಹಶೀಲ್ದಾರ್ ಮತ್ತು ಸಬ್ ರಿಜಿಸ್ಟರ್ ರವರ ಕಛೇರಿಗೆ ನೀಡಿದ್ದೇನು. ತಡೆಯಾಜ್ಞೆ ಇದ್ದ ಬಗ್ಗೆ ಜಮೀನನ್ನು ಯಾರು ಕೂಡ ಖರೀದಿ ಮಾಡದಂತೆ ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿರಲಿಲ್ಲ. ತಹಶೀಲ್ದಾರ್ ಮತ್ತು ಸಬ್ ರಿಜಿಸ್ಟರ್ ರವರ ಕಛೇರಿಗೆ ನೀಡಿದ್ದ ಮನವಿ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಇದೇ ನ್ಯಾಯಾಲಯದಲ್ಲಿ ನಾನು ಎಫ್.ಡಿ.ಪಿ. 02/2015 ನ್ನು ಹೂಡಿದ್ದೇನು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾನು ಈ ದಾವೆಯ ವಾದಿಯಾದ ಮೋಹನ್ ರೆಡ್ಡಿಯನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರಲಿಲ್ಲ. ಚಿತ್ರದುರ್ಗ ನ್ಯಾಯಾಲಯದ ಆದೇಶದ ವಿರುದ್ಧ ಮಂಜಮ್ಮ, ಪ್ರಕಾಶ ಮತ್ತು ಗಂಗಮ್ಮರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ

Dt 07.08.2024

ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

5 ನೇ ಪ್ರತಿವಾದಿ ತಿಪ್ಪೇಸ್ವಾಮಿ ನನ್ನ ಸಂಬಂಧಿ ಎಂದರೆ ಸರಿಯಲ್ಲ. ನಾನು, ಮಂಜಮ್ಮ, ಗಂಗಮ್ಮ ಮತ್ತು ತಿಪ್ಪೇಸ್ವಾಮಿ ರವರು ದಾವೆ ಮತ್ತು ಮೇಲ್ಮನವಿ ಇರುವುದನ್ನು ವಾದಿಗೆ ಮರೆಮಾಚಿ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ವಾದಿ ಖರೀದಿ ಮಾಡುವಂತೆ ನಾವುಗಳೇ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮೋಹನ್ ರೆಡ್ಡಿ ರವರು ದಾವಾ ಸ್ವತ್ತಿನಲ್ಲಿ ಟಮೋಟೋ ಮತ್ತು ಕುಂಬಳಕಾಯಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. 2013 ರಿಂದ ಇವರೆಗೆ ದಾವಾ ಸ್ವತ್ತನ್ನು ವಾದಿಯೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಜಮೀನಿನ ಬೆಲೆ ಜಾಸ್ತಿ ಆದ ಕಾರಣ ನಾನು ಮತ್ತು ಇತರ ಪ್ರತಿವಾದಿಗಳು ಸೇರಿ ವಾದಿಗೆ ತೊಂದರೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯೇ ದಾವಾ ಸ್ವತ್ತಿನ ಮಾಲೀಕರಾಗಿ ಸ್ವಾಧೀನದಲ್ಲಿ ಇದ್ದರೂ ಕೂಡ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಅಂಶಗಳನ್ನೊಳಗೊಂಡ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.